**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 694/2012**

**ಸಿ.ಡಬ್ಲೂಃ 16 ಪಿಡಬ್ಲೂಃ 13**

| | |
|---|---|
| ಸಾಕ್ಷಿದಾರರ ಹೆಸರು | ಕೇಶವ |
| ತಂದೆಯ ಹೆಸರು | ಈರೇಗೌ |
| ವಯಸ್ಸು | ಸುಮಾರು 57 ವರ್ಷ |
| ಉದ್ಯೋಗ | ಡಿ.ಎಸ್.ಪಿ. |
| ವಾಸ ಸ್ಥಳ | ಶಿಕಾರಿಪುರ |

**ದಿನಾಂಕಃ 26.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**Through V.C.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಅಭಿಯೋಜಕ ರವರಿಂದ**

ಆಗಸ್ಟ್ 2008 ರಿಂದ ಸೆಪ್ಟೆಂಬರ್ 2012 ರವರೆಗೂ ವಿಜಯಪುರದ ವೃತ್ತ ನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ. ದಿಃ 20.05.2012 ರಿಂದ ಸೆಪ್ಟೆಂಬರ್ 2012 ರವೆಗೂ ದೊಡ್ಡಬಳ್ಳಾಪುರ ವೃತ್ತ ಪೋಲೀಸ್ ಠಾಣೆಯಲ್ಲಿ ಪ್ರಭಾರ ವೃತ್ತ ನಿರೀಕ್ಷನಾಗಿ 5 ತಿಂಗಳು ಕಾರ್ಯನಿರ್ವಹಿಸಿರುತ್ತೇನೆ. ದಿಃ 26.05.2012 ರಂದು ಚಾಸಾ-15 ರವರಿಂದ ಮುಂದಿನ ತನಿಖೆಗಾಗಿ ಕಡತವನ್ನು ಪಡೆದುಕೊಂಡು, ಕಡತವನ್ನು ಪರಿಶೀಲಿಸಿದ್ದು, ಅಲ್ಲಿಯವರೆಗೂ ನಡೆದ ತನಿಖೆಯು ಸಮರ್ಪಕವಾಗಿದ್ದು, ದಿಃ 26.05.2012 ರಂದು ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 04.06.2012 ರಂದು ಚಾಸಾ-5 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 09.06.2012 ರಂದು 2 ಮತ್ತು 3 ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದಿದ್ದು, ಅವರನ್ನು ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ದಿಃ 07.07.2012 ರಂದು ಚಾಸಾ-12 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆಯು ಮುಕ್ತಾಯಗೊಂಡಿದ್ದು, ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. 2 ಮತ್ತು 3 ನೇ ಆರೋಪಿತರು ಗೈರು ಹಾಜರಿದ್ದು, ಅವರನ್ನು ನೋಡಿ ಗುರುತಿಸುವಲ್ಲಿ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದ**

ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ, ಪಿರ್ಯಾದುದಾರರ ಅನುಕೂಲಕ್ಕೆ ತಕ್ಕಂತೆ ಹೇಳಿಕೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಆರೋಪ ಸಾಬೀತಾಗದೇ ಇದ್ದರೂ ಸಹ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆರೋಪಿತರನ್ನು ದಸ್ತಗಿರಿ ಮಾಡಿರುವುದಿಲ್ಲ, 2 ಮತ್ತು 3 ನೇ ಆರೋಪಿತರನ್ನು ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ.

**<u>ಮರು ವಿಚಾರಣೆಃ</u> ಇಲ್ಲ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**